ಕರಾಸಕೈಅನಿನಿ
**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080 - 2340 7011 to 25, ಫ್ಯಾಕ್ಸ್ : 91-080-2314 3566 / 2338 9070, ತಂತಿ : ಮೈಸ್ಮಾಲ್ ಕಾರ್ಪ್
ಇ-ಮೈಲ್ : kssidcho@vsnl.com ವೆಬ್‌ಸೈಟ್ : www.kssidc.kar.nic.in

ವಾಣಿಜ್ಯ/ಕ.ಸಾ/ಮಾರಾಟ/ತಂತ್ರ/ಸೋಡಿ/2015 ದಿನಾಂಕ: 01–08–2015

## ಕಛೇರಿ ಆದೇಶ

ವಿಷಯ: ಕಬ್ಬಿಣ ಮತ್ತು ಉಕ್ಕು ಸಾಮಗ್ರಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಉತ್ಪಾದಕರು ನೀಡುವ ಸೋಡಿ(discount)ಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ: ಕಡತದ ಸಂಖ್ಯೆ: ವಾ/ಕಸಾ/ಮಾರಾಟ/ತಂತ್ರ/2015

---

2015–16ನೇ ಸಾಲಿಗೆ ನಿಗದಿಪಡಿಸಿರುವ ಕಬ್ಬಿಣ ಮತ್ತು ಉಕ್ಕು ಸಾಮಗ್ರಿ ಮಾರಾಟ ಗುರಿಗನುಗುಣವಾಗಿ ಪ್ರಥಮ ತ್ರೈಮಾಸಿಕದಲ್ಲಿ ನಡೆಸಿದ ವಹಿವಾಟನ್ನು ಗಮನಿಸಲಾಗಿ ಶೇಕಡ 47ರಷ್ಟು ಪ್ರಗತಿ ಸಾಧಿಸಲಾಗಿದೆ. ಪ್ರಸ್ತುತ ಆರ್ಥಿಕ ಹಿನ್ನಡೆಯಿಂದಾಗಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸಾಕಷ್ಟು ಪ್ರಮಾಣದಲ್ಲಿ ಸಾಮಗ್ರಿ ಖರೀದಿಸದಿರುವುದನ್ನು ಸಹ ಗಮನಿಸಲಾಗಿದೆ. ಈ ವಾಸ್ತವಾಂಶವನ್ನು ಮನಗಂಡ ಉತ್ಪಾದಕರು ಅವರು ಉತ್ಪಾದಿಸುವ ಉತ್ಪನ್ನಗಳನ್ನು ಮಾರಾಟ ಮಾಡುವ ಸಲುವಾಗಿ ಒಂದು ತಿಂಗಳಿನಲ್ಲಿ ಅಥವಾ ಮೂರು ತಿಂಗಳಿನಲ್ಲಿ ಎತ್ತುವ ಪರಿಮಾಣಕ್ಕನುಗುಣವಾಗಿ ಮಾಸಿಕ ಸೋಡಿ(monthly discount) ಮತ್ತು ತ್ರೈಮಾಸಿಕ ಸೋಡಿ(quarterly discount) ಯನ್ನು ನೀಡುತ್ತಿದ್ದಾರೆ.

ನಿಗಮದಲ್ಲಿಯೂ ಸಹ ಕಬ್ಬಿಣ ಮತ್ತು ಉಕ್ಕು ಸಾಮಗ್ರಿ ವಹಿವಾಟು ಹೆಚ್ಚಿಸುವ ಹಾಗೂ ನೋಂದಾಯಿತ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳನ್ನು ಸೆಳೆಯುವ ಸಲುವಾಗಿ ದಿನಾಂಕ 01–08–2015 ರಿಂದ ದಿನಾಂಕ 31–07–2016ರವರೆಗೆ ನಗದು ಮತ್ತು ಬ್ಯಾಂಕ್ ಗ್ಯಾರಂಟಿ ಹಾಗೂ ಕೆ.ಎಸ್.ಎಫ್.ಸಿ. ಸಂಗಡ ಮಾಡಿರುವ ಒಡಂಬಡಿಕೆಯಡಿ ಖರೀದಿಸುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಈ ಕೆಳಕಂಡಂತೆ ಸೋಡಿಗಳನ್ನು ನೀಡುವಂತೆ ಆದೇಶಿಸಲಾಗಿದೆ.

ಅ) ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ತಿಂಗಳಿನಲ್ಲಿ 60(ಅರವತ್ತು) ಮೆ.ಟನ್ ಖರೀದಿ ಮಾಡಿ ಅವರೇ ನೇರವಾಗಿ ಮೆ: SAIL ಮತ್ತು RINL ಉಗ್ರಾಣ/ರೈಲ್ವೆ ಸೈಡಿಂಗ್‌ನಿಂದ ಎತ್ತುವಳಿ ಮಾಡಿದಲ್ಲಿ ಅವರಿಗೆ ಉತ್ಪಾದಕರು ನೀಡುವ ಪರಿಮಾಣ ಸೋಡಿ (quantity discount) ಯನ್ನು ಯಥಾವತ್ತಾಗಿ ನೀಡುವುದು.

ಆ) ಮೇಲೆ ತಿಳಿಸಿರುವಂತೆ Flat products ಮತ್ತು Long Product ಸೇರಿಸಿ ತಿಂಗಳಿನಲ್ಲಿ ಒಟ್ಟು 60(ಅರವತ್ತು) ಮೆ.ಟನ್ ಖರೀದಿಸುವವರಿಗೂ ಸಹ ಆಯಾ ಸಾಮಗ್ರಿಗಳ ಪರಿಮಾಣಕ್ಕನುಗುಣವಾಗಿ ಉತ್ಪಾದಕರು ನೀಡುವ quantity discount ನ್ನು ಯಥಾವತ್ತಾಗಿ ನೀಡುವುದು.

ಇ) ಮೇಲೆ ತಿಳಿಸಿರುವಂತೆ ನೋಂದಾಯಿತ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು Flat products ಮತ್ತು Long Product ಸೇರಿಸಿ ಒಂದು ತಿಂಗಳಿನಲ್ಲಿ 100(ನೂರು) ಮೆ.ಟನ್ ಪ್ರಕಾರ ಮೂರು ತಿಂಗಳಿನಲ್ಲಿ 300(ಮುನ್ನೂರು) ಮೆ.ಟನ್ ಅಥವಾ ಮೇಲ್ಪಟ್ಟು ಖರೀದಿಸಿದಲ್ಲಿ ಅವರಿಗೆ ಮಾಸಿಕ ಸೋಡಿ(monthly discount) ಜೊತೆಗೆ ತ್ರೈಮಾಸಿಕ ಸೋಡಿ(quarterly discount) ಯನ್ನು ಸಹ ಯಥಾವತ್ತಾಗಿ ವಿಸ್ತರಿಸುವುದು.

ಈ) ಮೇಲಿನಂತೆ ಉತ್ಪಾದಕರು ನೀಡುವ ಸೋಡಿ ಪ್ರಯೋಜನ ಪಡೆಯಲು ಬಯಸುವ ಬೆಂಗಳೂರಿನಿಂದ ಹೊರಗಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸ್ವಂತ ಸಾಗಣೆಯಡಿ ಉತ್ಪಾದಕರ ಉಗ್ರಾಣ/ರೈಲ್ವೆ ಸೈಡಿಂಗ್ ನಿಂದ ಎತ್ತುವಳಿ ಮಾಡಿದ ಸಂದರ್ಭಗಳಲ್ಲಿ ಅವರಿಗೂ ಸಹ ಮೇಲಿನಂತೆ ವಿಸ್ತರಿಸತಕ್ಕದ್ದು.

ಉ) ಮೇಲಿನಂತೆ ಸೋಡಿಯನ್ನು ವಿಸ್ತರಿಸಲು ಅನುವಾಗುವಂತೆ ಸಾಮಗ್ರಿಗಳನ್ನು ಖರೀದಿಸುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಹೆಸರು, ವಿಳಾಸ, ಸಂಕೇತ ಸಂಖ್ಯೆ(code no.), ಇನ್ವಾಯ್ಸ್ ಸಂಖ್ಯೆ, ದಿನಾಂಕ, ಪರಿಮಾಣ ಸೇರಿದಂತೆ ಸರಕಿನ ವಿವರ ಹಾಗೂ ಮೊತ್ತವನ್ನು ಸೇರಿಸಿ ಪಟ್ಟಿ ತಯಾರಿಸಿ ಮೇಲಾಧಿಕಾರಿಗಳ ಮೂಲಕ ದೃಢೀಕರಿಸಿ credit note ವಿತರಿಸಲು ಕೇಂದ್ರ ಕಛೇರಿ ವಾಣಿಜ್ಯ ವಿಭಾಗಕ್ಕೆ ಪ್ರತಿ ತಿಂಗಳು 10ನೇ ತಾರೀಖಿನೊಳಗೆ ತಪ್ಪದೆ ಕಳುಹಿಸತಕ್ಕದ್ದು.

ಊ) ಮೇಲಿನಂತೆ ನೀಡಲಾಗುವ ಸೋಡಿಯನ್ನು ಉತ್ಪಾದಕರಿಂದ ಸ್ವೀಕರಿಸಿದ ನಂತರವೇ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಕ್ರೆಡಿಟ್ ನೋಟ್ ಮೂಲಕ ನೀಡುವುದು.

ವಿಭಾಗ ಮತ್ತು ವಲಯಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮೇಲೆ ವಿಸ್ತರಿಸಿರುವ ಸೌಲಭ್ಯಗಳನ್ನು ಬಳಸಿಕೊಳ್ಳುವಂತೆ ಕೈಗಾರಿಕೆಗಳಿಗೆ ಭೇಟಿ ನೀಡಿ ವಿವರಿಸುವ ಮೂಲಕ ವಹಿವಾಟನ್ನು ಹೆಚ್ಚಿಸತಕ್ಕದ್ದು.

(ಮೊಹಮ್ಮದ್ ಮೊಹಸಿನ್)
ವ್ಯವಸ್ಥಾಪಕ ನಿರ್ದೇಶಕರು

11/08/2015

ಗೆ,

1. ಉಪ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ,.ಬೆಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರ್ಗಿ
2. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಚನ್ನಸಂದ್ರ ಉಗ್ರಾಣ.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು/ವ್ಯವಸ್ಥಾಪಕರು(ಕೈವ) ಬೆಂ-ನಗರ/ಗ್ರಾಮಾಂತರ/ಪೀಣ್ಯ/ ತುಮಕೂರು/ದಾವಣಗೆರೆ/ಹುಬ್ಬಳ್ಳಿ/ಬೆಳಗಾಂ/ಗುಲಬರ್ಗಾ/ಬಳ್ಳಾರಿ/ಮೈಸೂರು/ಶಿವಮೊಗ್ಗ/ ಮಂಗಳೂರು.
4. ಕಾರ್ಯ ನಿರ್ವಾಹಕ ಅಭಿಯಂತರರು, ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಗುಲಬರ್ಗಾ.
5. ಎಲ್ಲಾ ಶಾಖಾ / ಮಾರಾಟವ್ಯವಸ್ಥಾಪಕರು, ಪೀಣ್ಯ-1ನೇ ಹಂತ/ತುಮಕೂರು/ವೀರಸಂದ್ರ/ ದಾವಣಗೆರೆ/ಹರಿಹರ/ಹುಬ್ಬಳ್ಳಿ/ಸಿರಸಿ//ಬೆಳಗಾವಿ/ಗುಲಬರ್ಗಾ/ವಿಜಯಪುರ/ಬಾಗಲಕೋಟೆ/ ಹೊಸಪೇಟೆ/ಮೈಸೂರು/ಶಿವಮೊಗ್ಗ/ಯಯ್ಯಾಡಿ-ಮಂಗಳೂರು/ಚಿಕ್ಕಮಗಳೂರು/ಹಾಸನ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ವಾಣಿಜ್ಯ)/(ಕೈವ/ಹಣಕಾಸು),ಕರಾಸಕೈಅನಿನಿ., ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು(ವಾಣಿಜ್ಯ), (ಅಲೆಪ/ಹಣಕಾಸು) ಕರಾಸಕೈಅನಿನಿ., ಬೆಂಗಳೂರು
3. ಉಪ ಪ್ರಧಾನ ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ., ಬೆಂಗಳೂರು ಇವರಿಗೆ ವೆಬ್‌ಸೈಟಿನಲ್ಲಿ ಅಳವಡಿಸುವ ಸಲುವಾಗಿ.